ದಿನಾಂಕಃ 21-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟಿ ಸವಾಲುಃ–** ವಾದಿ ಪರ ಶ್ರೀ ಎನ ಆರ ಬಿ ವಕೀಲರಿಂದ

ಖರೀದಿ ಮಾಡಿದ ಜಾಗೆ ಗಾಂವಠಾಣಾ ಜಾಗೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಅದು ಗಾಂವಠಾಣಾ ಜಾಗೆ ಅಲ್ಲ ಆದರೆ ಮೂರು ಜನರ ಹೆಸರಿನಲ್ಲಿ ಇದ್ದ ಜಾಗೆಯನ್ನು ಖರೀದಿಸಿದ್ದೆನೆ ಎಂದು ನುಡಿದಿದ್ದಾರೆ. ನಿಡಿ 12 ಖರೀದಿ ಪತ್ರದಲ್ಲಿ ಭೂ–ಪರಿವರ್ತನೆ ಆದ ಜಮೀನಿನ ಸರ್ವೆ ಸಂಖ್ಯೆ ಬರೆಸಿಲ್ಲ ಎಂದರೆ ಸರಿಯಲ್ಲ. ಪಂಚಾಯತಿಯಲ್ಲಿ ಗುರುರಾಜ ಕುಲಕರ್ಣಿ, ದತ್ತಾತ್ರೇಯ ಕುಲಕರ್ಣಿ ಹಾಗೂ ವಿನಾಯಕ ಕುಲಕರ್ಣಿ ಇವರ ಹೆಸರಿನಲ್ಲಿ ಯಾವುದೇ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ಸಂಖ್ಯೆ ಜಮೀನು ಯಾವಾಗ ಭೂ–ಪರಿವರ್ತನೆ ಆಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

ನಿಡಿ 22 ರಿಂದ 114 ದಾಖಲೆಗಳನ್ನು ಮೊದಲು ಹಾಜರುಪಡಿಸಲು ತೊಂದರೆ ಇರಲಿಲ್ಲ. ಪ್ರತಿವಾದಿ 4 ಬಿ ಈಗ ಹುರಳಿಕುಪ್ಪಿ ಗ್ರಾಮಪಂಚಾಯತಿಯ ಸದಸ್ಯರು ಎಂದರೆ ಸರಿ. ಪ್ರತಿವಾದಿ 4 ಬಿ ಹುರಳಿಕುಪ್ಪಿ ಗ್ರಾಮಪಂಚಾಯತಿಯ ಸದಸ್ಯನಾರಾಗಿರುವುದರಿಂದ ಪಿಡಿಓ ರವರೊಂದಿಗೆ ಮೀಲಾಪಿಯಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೆನೆ ಎಂದರೆ ಸರಿಯಲ್ಲ. ಗುರುರಾಜ ಕುಲಕರ್ಣಿ, ದತ್ತಾತ್ರೇಯ ಕುಲಕರ್ಣಿ ಹಾಗೂ ವಿನಾಯಕ ಕುಲಕರ್ಣಿ ಇವರ ಹೆಸರು ದಾಖಲೆಗಳಿಂದ ತೆಗೆದು ನನ್ನ ಹೆಸರನ್ನು ಯಾವ ವರ್ಷದಲ್ಲಿ ದಾಖಲಿಸಲಾಗಿದೆ ಎಂದು

ನನಗೆ ಗೊತ್ತಿಲ್ಲ. ನಾನು ಭೂ-ಪರಿವರ್ತನೆ ಆದ ಸರ್ವೇ ಸಂಖ್ಯೆ 164 ನ್ನು ಖರೀದಿ ಮಾಡದಿದ್ದರೂ ಸಹ ದಾಖಲೆಗಳನ್ನು ಸೃಷ್ಟಿ ಮಾಡಿದ್ದೆನೆ ಎಂದರೆ ಸರಿಯಲ್ಲ. ಇವತ್ತಿನವರೆಗೂ ಸರ್ವೇ ಸಂಖ್ಯೆ 164 ಕ್ಕೆ ವಾದಿಯರು ಮತ್ತು 1 ನೇ ಪ್ರತಿವಾದಿಯ ಹೆಸರು ದಾಖಲ್ ಇದೆ ಎಂದರೆ ಸರಿಯಲ್ಲ. ನಾನು ನನ್ನ ಕೇಸಿಗೆ ಅನುಕೂಲ ಆಗಲೀ ಎಂದು ಪಂಚಾಯತಿ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)